ದಿ.21.08.2021ರಂದು ಸಾಕ್ಷಿಯನ್ನು ಮತ್ತೆ ಕರೆಸಿ ಪ್ರಮಾಣಬೋದಿಸಲಾಯ್ತು.

**ಪಾಟೀ ಸವಾಲುಃ 5 ಮತ್ತು 6ನೇ ಆರೋಪಿ ಪರ ವಕೀಲರುಃ**

**ಶ್ರೀ ಎಸ್ ಎಸ್‌ರವರಿಂದ ಃ**

ಘಟನೆ ಪೂರ್ವದಲ್ಲಿ ನಾನು, ನನ್ನ ಪತ್ನಿ, ನನ್ನ ಮಗ ಜೊತೆಯಲ್ಲಿ ವಾಸವಾಗಿದ್ದೆವು. ನಮ್ಮ ಮನೆಗೆ ಉತ್ತರಕ್ಕೆ ಬಾಗಿಲು ಇದೆ ಎಂದರೆ ಪೂರ್ವಕ್ಕೆ ಒಂದು ಹಾಗೂ ನಂದಿ ದಿಕ್ಕಿಗೆ ಒಂದು ಬಾಗಿಲು ಇದೆ. ದಕ್ಷಿಣಕ್ಕೆ ಬಾಗಿಲು ಇರುವುದಿಲ್ಲ. ಪೂರ್ವದ ಬಾಗಿಲ ಮುಂದೆ ರಸ್ತೆ ಇದೆ. ನಮ್ಮ ಮನೆಯ ಮುಂದಿನ ರಸ್ತೆಯಲ್ಲಿ ಕಾರು, ಮೋಟಾರು, ಟ್ರಾಕ್ಟರ್ ಓಡಾಡುತ್ತವೆ ಬಸ್ ಬರುವುದಿಲ್ಲ. ನಂದಿ ದಿಕ್ಕಿನ ಬಾಗಿಲಿಗೆ ರಸ್ತೆ ಇದೆ ಎಂದರೆ ಸರಿಯಲ್ಲ. ನಮ್ಮ ಊರಿನ ಪೂರ್ವ ದಿಕ್ಕಿನಲ್ಲಿ ನಮ್ಮ ಮನೆಯ ನಂದಿ ದಿಕ್ಕಿನಲ್ಲಿ ಸರ್ಕಾರಿ ರಸ್ತೆ ಇದೆ. ಸದರಿ ರಸ್ತೆಯಿಂದ ನಮ್ಮ ಮನೆಗೆ ಬಂದರೆ ರಸ್ತೆಯ ಎಡಗಡೆ ನಮ್ಮ ಮನೆ ಇದೆ ರಸ್ತೆಯ ಬಲಗಡೆ ಅಶ್ವಥಕಟ್ಟೆ ಇದೆ. ಅಶ್ವಥಕಟ್ಟೆ ಇರುವ ಆಚೆ ಕಡೆಗೆ ಒಂದು ಸರ್ಕಾರಿ ಶಾಲೆ ಇದೆ. ಅಶ್ವಥಕಟ್ಟೆಯ ಪಕ್ಕದಲ್ಲಿ 4ನೇ ಆರೋಪಿಗೆ ಸಂಬಂಧಿಸಿದ ಒಂದು ಪೆಟ್ಟಿ ಅಂಗಡಿ ಇದೆ.

ನನಗೆ ಚಾಸಾ-9 ಶಾಮಣ್ಣ ಗೊತ್ತಿಲ್ಲ. ಗಂಗಪ್ಪ ಹಾಗೂ ಅವರ ಕುಟುಂಬದವರ ಪರಿಚಯ ಇದೆ. ಗಂಗಪ್ಪನು ಶಾಂತಕುಮಾರನ ಚಿಕ್ಕಪ್ಪ ಎಂದರೆ ಗೊತ್ತಿಲ್ಲ. ಅಶ್ವಥಕಟ್ಟೆಯ ಬಲಗಡೆಯಲ್ಲಿ ವೆಂಕಟರಾಯಪ್ಪರವರ ಮನೆ ಇದೆ ಎಂದರೆ ಗೊತ್ತಿಲ್ಲ. ಮುನಿಕೃಷ್ಣಪ್ಪನ ಮನೆಯ ನಂತರ ಗಂಗಪ್ಪನ ಮನೆ ಇದೆ ಎಂದರೆ ಸರಿಯಲ್ಲ. ದೊಡ್ಡಚಿನ್ನಪ್ಪ, ದೇವರಾಜು, ಮಂಜುನಾಥ ಒಟ್ಟುಗೂಡಿ ವಾಸಮಾಡುತ್ತಾರೆ ಎಂದರೆ ಸರಿ. ಅವರ ಮನೆ ರಸ್ತೆಯ ಬಲಗಡೆ ಇದೆ ಎಂದರೆ ಸರಿ. ಪ್ರಾಸಾ-1ರವರ ಮನೆಯು ಅದೇ ಲೈನ್ ನಲ್ಲಿದೆ ಎಂದರೆ ಸರಿ.

ನನ್ನ ಮನೆಯ ಒಳಗೆ ಮಲಗಲು ಬೇರೆ ಬೇರೆ ರೂಮ್‌ಗಳು ಇವೆ. ಒಟ್ಟು ನಾಲ್ಕು ಕೋಣೆಗಳಿವೆ. ಸಾಕ್ಷಿ ಮುಂದುವರಿದು ಘಟನೆ ಸಮಯದಲ್ಲಿ ನಾನು ಇದ್ದ ಮನೆಯಲ್ಲಿ ಎರಡು ಕೋಣೆಗಳು ಇದ್ದವು ಎಂದು ನುಡಿದಿರುತ್ತಾರೆ. ಘಟನೆಯ ಕಾಲಕ್ಕೆ ನಮ್ಮ ಮನೆಯಲ್ಲಿ ಮೊಬೈಲ್ ಇರಲಿಲ್ಲ. ನಾನು ರಾಗಿ ಬೆಳೆ ಬೆಳೆಯುತ್ತೇನೆ. ನನಗೆ ಎರಡು ಎಕರೆ ಜಮೀನು ಇದೆ. ಸದರಿ ಜಮೀನಿನಲ್ಲಿ ಮಳೆ ಬಂದರೆ ಮಾತ್ರ ರಾಗಿ ಬೆಳೆ ಬರುತ್ತದೆ ಎಂದರೆ ಸರಿ. ನಾನು ಬೇರೆಯವರ ಜಮೀನಿನಲ್ಲಿ ಕೂಲಿ ಕೆಲಸಕ್ಕೆ ಹೋಗುವುದಿಲ್ಲ. ಎರಡು ಎಕರೆ ಜಮೀನಿನ ರಾಗಿ ಬೆಳೆಯ ಮೇಲೆ ನನ್ನ ಕುಟುಂಬ ಅವಲಂಬಿತವಾಗಿತ್ತು ಎಂದರೆ ಸರಿ.

ಸಾಮಾನ್ಯವಾಗಿ ನಮ್ಮ ಜಮೀನಿಗೆ ಕೆಲಸಕ್ಕೆ ಬೆಳಗ್ಗೆ 9 ಗಂಟೆಗೆ ಹೋಗುತ್ತಿದ್ದೆವು. ನಾನು ಕೆಲಸಕ್ಕೆ ಮುಂಚೆ ಹೋಗುತ್ತಿದ್ದೆನು ನನ್ನ ಪತ್ನಿ ರಾಗಿ ಮುದ್ದೆ ಮಾಡಿಕೊಂಡು ನಂತರ ಹೊಲಕ್ಕೆ ಬರುತ್ತಿದ್ದಳು. ನಾನು ಹಾಗೂ ನನ್ನ ಪತ್ನಿ ಜಮೀನಿನಲ್ಲಿ ಜೊತೆಗೂಡಿ ಊಟ ಮಾಡುತ್ತಿದ್ದೆವು. ಸಾಮಾನ್ಯವಾಗಿ 9 ಗಂಟೆಗೆ ಜಮೀನಿನಲ್ಲಿ ಊಟ ಮಾಡುತ್ತಿದ್ದೆವು. ಜಮೀನಿನಗೆ ಹೋಗದೇ ಮನೆಯಲ್ಲಿಯೇ ಇದ್ದ ದಿನ ನಾನು ಹಾಗೂ ನನ್ನ ಪತ್ನಿ ಸಾಮಾನ್ಯವಾಗಿ 9 ಗಂಟೆಗೆ ಊಟ ಮಾಡುತ್ತಿದ್ದೆವು. ನಾವು ಸಾಮಾನ್ಯವಾಗಿ ಮೂರು ಹೊತ್ತು ಸಹ ರಾಗಿ ಊಟ ಮಾಡುತ್ತಿದ್ದೆವು.

ಘಟನೆ ದಿನ ನಾನು, ನನ್ನ ಪತ್ನಿ, ನನ್ನ ಮಗ ಹಾಗೂ ನನ್ನ ತಂದೆ ತಾಯಿ 9 ಗಂಟೆ ಸಮಯದಲ್ಲಿ ಊಟ ಮಾಡಿದ್ದೆವು ಎಂದರೆ ಸರಿಯಲ್ಲ ಶಿವರಾತ್ರಿ ಇದ್ದುದರಿಂದ ನಾವು ಊಟ ಮಾಡಿರಲಿಲ್ಲ. ಘಟನೆಯ ಹಿಂದಿನ ದಿನ ರಾತ್ರಿ ನಾವು ಊಟ ಮಾಡಿದ್ದೆವು. ರಾಗಿ ಮುದ್ದೆ ಊಟ ಮಾಡಿದ್ದೆವು. ಸಾಮಾನ್ಯವಾಗಿ ಶಿವರಾತ್ರಿ ಹಬ್ಬದ ವಿಶೇಷವಾಗಿ ಸೆರಿಬಿಂಡಿ(ಅಕ್ಕಿ ಉಂಡೆ) (ತಂಬಿಟ್ಟು) ಮಾಡುತ್ತೇವೆ. ಅದರ ಜೊತೆ ಬೇರೆ ಏನೂ ಮಾಡಿರಲಿಲ್ಲ.

ಶಿವರಾತ್ರಿ ಹಿಂದಿನ ದಿನದಿಂದ ರಾತ್ರಿ ಜಾಗರಣೆ ಮಾಡುತ್ತೇವೆ ಎಂದರೆ ಸರಿ. ಮಾರನೇ ದಿನ ಸ್ನಾನ ಮಾಡಿ ಶುಭ್ರವಾದ ನಂತರ ತಂಬಿಟ್ಟು ಸೇವಿಸುತ್ತೇವೆ. ಘಟನೆಯ ದಿನ ನಾನು, ನನ್ನ ಪತ್ನಿ ಹಾಗೂ ನಮ್ಮ ಮನೆಯವರು ಸ್ನಾನ ಮಾಡಿ ಪೂಜೆ ಮಾಡಿದ್ದೆವು ಎಂದರೆ ನನ್ನ ಪತ್ನಿ ಮಾಡಿದ್ದರು. ನಂತರ ಶಿವರಾತ್ರಿ ನಿಮಿತ್ತ ಮನೆಯ ಹಿರಿಯರಿಗೆ ನಮಸ್ಕರಿಸಿ ದೇವಸ್ಥಾನಕ್ಕೆ ಹೋಗುತ್ತಾರೆ ಎಂದರೆ ಸರಿ.

ನಮ್ಮ ಊರಿನಲ್ಲಿ ಶನಿ ಮಹಾತ್ಮ ದೊಡ್ಡ ದೇವಸ್ಥಾನ ಇದೆ. ಸಪ್ಲಮ್ಮ ನಮ್ಮ ಮನೆ ದೇವರು. ಶಿವರಾತ್ರಿ ಹಬ್ಬದ ನಿಮಿತ್ತ ಪೂಜೆಗಾಗಿ ನೆಂಟರನ್ನು ಕರೆಯುತ್ತಾರೆ ಎಂದರೆ ಸರಿಯಲ್ಲ. ನಮ್ಮ ಊರು ಕುಂದಾಣ ಗ್ರಾಮ ಪಂಚಾಯ್ತಿಗೆ ಒಳಪಟ್ಟಿದೆ ಎಂದರೆ ಸರಿ. ನಮ್ಮ ಊರಿನಿಂದ ಕುಂದಾಣ ಗ್ರಾಮವು ಮೂರು ಕಿಮೀ ಅಂತರದಲ್ಲಿ ಇದೆ. ಸದರಿ ಪಂಚಾಯ್ತಿಗೆ ನಮ್ಮ ಊರಿನಿಂದಒಬ್ಬ ಸದಸ್ಯರು ಚುನಾಯಿತರಾಗಿರುತ್ತಾರೆ ಎಂದರೆ ಗೊತ್ತಿಲ್ಲ. ಚುನಾವಣೆಯಲ್ಲಿ ನಮ್ಮ ಜನಾಂಗಕ್ಕೆ ಸೇರಿದ ಒಬ್ಬ ವ್ಯಕ್ತಿಯನ್ನು ಚುನಾಯಿತನನ್ನಾಗಿ ಮಾಡುತ್ತಾರೆ ಎಂದರೆ ಗೊತ್ತಿಲ್ಲ. 2005ರಿಂದ 2010ರ ಅವಧಿಯಲ್ಲಿ ನಮ್ಮೂರಿನ 6, 15, 16ನೇ ಆರೋಪಿಗಳ ಬಾಮೈದುನ ಮುನಿರಾಜುರವರು ಆಯ್ಕೆಯಾಗಿದ್ದರು ಎಂದರೆ ಗೊತ್ತಿಲ್ಲ. 6ನೇ ಆರೋಪಿಯ ಬಾಮೈದುನ ಚಂದ್ರುವರು 2010ರಿಂದ 2015ನೇ ಸಾಲಿನ ಅವಧಿಯಲ್ಲಿ ಪಂಚಾಯ್ತಿಯಲ್ಲಿ ಚುನಾಯಿತರಾಗಿದ್ದರು ಎಂದರೆ ಇರಬಹುದು. 6ನೇ ಆರೋಪಿಯ ಪತ್ನಿಯನ್ನು ನಾನು ನೋಡಿಲ್ಲ. 6ನೇ ಆರೋಪಿಯ ಪತ್ನಿ ಗೌರಮ್ಮ 2015ರಿಂದ 2020ರ ಅವಧಿಯಲ್ಲಿ ನಮ್ಮೂರಿನ ಪಂಚಾಯ್ತಿಗೆ ಆಯ್ಕೆಯಾಗಿದ್ದರು ಎಂದರೆ ಗೊತ್ತಿಲ್ಲ. 16ನೇ ಆರೋಪಿ, 6 ಮತ್ತು 15ನೇ ಆರೋಪಿಗಳ ಸಹೋದರ ಎಂದರೆ ಸರಿ. 16ನೇ ಆರೋಪಿ 2020ರ ಸಾಲಿನಲ್ಲಿ ಪಂಚಾಯ್ತಿಗೆ ಆಯ್ಕೆಯಾಗಿದ್ದರು ಎಂದರೆ ಗೊತ್ತಿಲ್ಲ. ಈಗ ಅವರು ಕುಂದಾಣ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಎಂದರೆ ಗೊತ್ತಿಲ್ಲ.

ಘಟನೆಯ ದಿನ ನಾನು, ನನ್ನ ಪತ್ನಿ, ನನ್ನ ಮಗ ಹಾಗೂ ನನ್ನ ತಂದೆ ತಾಯಿ ಮನೆಯಲ್ಲಿಯೇ ಇದ್ದೆವು ಎಂದರೆ ಸರಿ. ಘಟನೆಯ ದಿನ ಬೆಳಗ್ಗೆ 4 ಗಂಟೆಗೆ ಎದ್ದಿದ್ದೆವು. 9 ಗಂಟೆ ಸಮಯದಲ್ಲಿ ಪೂಜೆ ಮುಗಿಸಿದ್ದೆವು ಎಂದರೆ ಸರಿಯಲ್ಲ. ಘಟನೆಯ ದಿನ ಬೆಳಗ್ಗೆ 4 ಗಂಟೆಯಿಂದ 9 ಗಂಟೆ ಸಮಯದವರೆಗೆ ನಾನು, ನನ್ನ ಪತ್ನಿ ಹಾಗೂ ನನ್ನ ಮಗ ಮನೆಯಲ್ಲಿಯೇ ಇದ್ದೆವು ಎಂದರೆ ಸರಿ. ಘಟನೆಯ ಇಡೀ ದಿನ ನಾನು ಊಟ ಮಾಡಿರಲಿಲ್ಲ. ನಮ್ಮ ಊರಿನಲ್ಲಿ ಸುಮಾರು 80 ಮನೆಗಳು ಇವೆ. ಸಾಮಾನ್ಯವಾಗಿ ಎಲ್ಲಾ ಮನೆಯವರು ಪರಿಚಯಸ್ಥರು ಎಂದರೆ ಸರಿ. ನಮ್ಮ ಊರಿನಲ್ಲಿ ನಮ್ಮ ಜಾತಿಯವರದ್ದು ಸುಮಾರು ಮೂವತ್ತು ಮನೆಗಳಿವೆ. ನಮ್ಮ ಜಾತಿಯ ಮನೆಗಳಲ್ಲಿ ಕಾರ್ಯಕ್ರಮಗಳಾದರೆ ಹೋಗಿ ಬಂದು ಮಾಡುತ್ತೇವೆ. 5, 6, 15, 16ನೇ ಆರೋಪಿಗಳು ಬೊವಿ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ನಾನು ದೊಡ್ಡಬಳ್ಳಾಪುರ, ದೇವನಹಳ್ಳಿ, ಚಿಕ್ಕಬಳ್ಳಾಪುರ ಸಂತೆಗಳಿಗೆ ಹೋಗುವುದಿಲ್ಲ. ನನ್ನ ತಂದೆ ಇದ್ದಾಗ ಅವರೇ ನಮ್ಮ ಮನೆಯ ಜವಬ್ದಾರಿಗಳನ್ನು ನೋಡಿಕೊಳ್ಳುತ್ತಿದ್ದರು. ನಾನು ಕೈಯಲ್ಲಿ ಗಡಿಯಾರ ಹಾಕದೇ ಇರುವುದರಿಂದ ನನಗೆ ವೇಳೆ ಗೊತ್ತಾಗುವುದಿಲ್ಲ ಎಂದರೆ ಸರಿ. ನನಗೆ ಓದು ಬರಹ ಬರುವುದಿಲ್ಲ ಆದರೆ ಸಹಿ ಮಾಡುತ್ತೇನೆ. ನನ್ನ ತಂದೆ ತಾಯಿಗೆ ಓದು ಬರುವುದಿಲ್ಲ ಎಂದರೆ ಸರಿ.

ನಮ್ಮ ಊರಿನ ನನ್ನ ಪರಿಚಯಸ್ಥರಿಗೆ ಕಾರ್ ಬೈಕ್‌ಗಳಿವೆ ಎಂದರೆ ಗೊತ್ತಿಲ್ಲ. ನಮ್ಮ ಊರಿಗೆ ಸೇರಿದ ವಿಶ್ವನಾಥಪುರ ಪೋಲಿಸ್ ಠಾಣೆ ಗೊತ್ತು. ವಿಶ್ವನಾಥಪುರ ಪೋಲಿಸ್ ಠಾಣೆಯ ದೇವನಹಳ್ಳಿ-ದೊಡ್ಡಬಳ್ಳಾಪುರ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಇದೆ. ನಮ್ಮ ಊರಿನಿಂದ ವಿಶ್ವನಾಥಪುರ ಪೋಲಿಸ್ ಠಾಣೆಗೆ ಹೋಗುವ ರಸ್ತೆಯ ಎಡಗಡೆ ತಿರುಗಿದರೆ ದೇವನಹಳ್ಳಿಗೆ ಹೋಗುವ ರಸ್ತೆ ಇದೆ. ನಮ್ಮ ಊರಿನಿಂದ ಬಂದು ಎಡಗಡೆಗೆ ತಿರುಗಿದರೆ ರಸ್ತೆಯಲ್ಲಿಯೇ ವಿಶ್ವನಾಥಪುರ ಪೋಲಿಸ್ ಠಾಣೆ ಇದೆ ಎಂದರೆ ಸರಿ.

ನಾನು ನಮ್ಮೂರಿನ ಜಮೀನುಗಳಿಗೆ ಸಂಬಂಧಿಸಿದಂತೆ ಸಿವಿಲ್ ದಾವೆಗಳನ್ನು ದಾಖಲಿಸಿದ್ದೇನೆ ಹಾಗೂ ಸಾಕ್ಷಿಗಳನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಪತ್ನಿ, ನನ್ನ ಚಿಕ್ಕಪ್ಪ ಹಾಗೂ ನನ್ನ ಚಿಕ್ಕಪ್ಪನ ಮಗ ದೇವರಾಜುವಿಗೆ ಹಲ್ಲೆಯಾಗಿದ್ದು ನನಗೂ ಸಹ ಹಲ್ಲೆಯಾಗಿದ್ದರಿಂದ ಪೋಲಿಸರು ಕಂಡರೇ ಹೇಳಬೇಕು ಅನ್ನುವ ಕುತೂಹಲ ಇತ್ತು.

ದೇವನಹಳ್ಳಿಯ ಸರ್ಕಾರಿ ಆಸ್ಪತ್ರೆಗೆ 09.30ರಿಂದ 10.30ರ ಸಮಯದಲ್ಲಿ ಹೋಗಿದ್ದೆವು. ದೇವನಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರು ಇದ್ದರು. ದೇವನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಹೋಗಬೇಕಾದರೆ ವಿಶ್ವನಾಥಪುರ ಪೋಲಿಸ್ ಠಾಣೆಯ ಮುಂದೆಯೇ ಹೋಗಬೇಕು ಎಂದರೆ ನಾವು ಆ ದಾರಿಯಲ್ಲಿ ಹೋಗಿರಲಿಲ್ಲ ಬೇರೆ ದಾರಿಯಲ್ಲಿ ಹೋಗಿದ್ದೆವು. ಆಸ್ಪತ್ರೆಯಲ್ಲಿ ವಿಶ್ವನಾಥಪುರ ಪೋಲಿಸರು ಇದ್ದರು. ಆಸ್ಪತ್ರೆಯಲ್ಲಿ ವೈದ್ಯರು ಮೊದಲು ನನ ಪತ್ನಿಯನ್ನು, ದೇವರಾಜು ಹಾಗೂ ದೊಡ್ಡಚಿನ್ನಪ್ಪನನ್ನು ದಾಖಲಿಸಿಕೊಂಡಿದ್ದರು. ನಂತರ ನನ್ನನ್ನು ದಾಖಲಿಸಿಕೊಂಡಿದ್ದರು. ನನಗೆ ಗಾಯಗಳಾಗಿದ್ದು ಮೈಮೇಲೆ ರಕ್ತ ಸೋರುತ್ತಿತ್ತು ಎಂದರೆ ಸರಿ. ವೈದ್ಯರು ಗಾಯ ಹೇಗೆ ಏಕೆ ಎಲ್ಲಿ ಆಗಿತ್ತು ಎಂದು ಕೇಳಿ ಬರೆದುಕೊಂಡಿದ್ದರು. ದೊಡ್ಡಚಿನ್ನಪ್ಪನಿಗೆ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕಳುಹಿಸಿದ್ದರು. ವೈದ್ಯರಿಗೆ ನಾನು ಹಲ್ಲೆ ಮಾಡಿದ್ದವರ ಹೆಸರನ್ನು ಹೇಳಿದ್ದೆನು. ವೈದ್ಯರು ಹೆಸರುಗಳನ್ನು ಬರೆದುಕೊಂಡಿದ್ದರು. ದೇವನಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ನನ್ನನ್ನು ಅಡ್ಮಿಟ್ ಮಾಡಿದ್ದರು. ಮರುದಿನ ಮಧ್ಯಾಹ್ನ 2 ಗಂಟೆ ಸಮಯದಲ್ಲಿ ನನ್ನನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿದ್ದರು. ನಾನು ಒಳರೋಗಿಯಾಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾಗ ಪೋಲಿಸರು ನನ್ನನ್ನು ಬಂದು ನೋಡಿದ್ದರು. ಪೋಲಿಸರು ನನ್ನ ಹೆಸರು ವಿಳಾಸ ಹಾಗೂ ಹಲ್ಲೆಯ ಕುರಿತು ಕೇಳಿದ್ದರು. ನಾನು ಪೋಲಿಸರಿಗೆ ಘಟನೆಯ ಕುರಿತು ಹಲ್ಲೆ ಮಾಡಿದವರ ಹೆಸರು ಸಮೇತ ಹೇಳಿದ್ದೆ ವಿಶ್ವನಾಥಪುರ ಪೋಲಿಸರು ಬರೆದುಕೊಂಡಿದ್ದರು. ಪೋಲಿಸರು ಆಗ ನನ್ನ ಸಹಿಪಡೆದಿರಲಿಲ್ಲ.

ಪೋಲಿಸರು ನನ್ನನ್ನು ವಿಚಾರಿಸಿದಾಗ ಬೆಳಗ್ಗೆ 11.30 ಆಗಿರಬಹುದು. ನನ್ನನ್ನು ದಾಖಲು ಮಾಡಿಸಿಕೊಂಡ ವೈದ್ಯರು ನಾನು ದಾಖಲಾದಾಗ ನನ್ನ ಸಹಿ ಪಡೆದಿದ್ದರು. ಆಸ್ಪತ್ರೆಯಲ್ಲಿ ನಾನು ದಾಖಲಾದಾಗ ನಮ್ಮ ಊರಿನ ಸುಮಾರು ಜನರು ನನ್ನನ್ನು ನೋಡಲು ಬಂದಿದ್ದರು ಎಂದರೆ ಸರಿಯಲ್ಲ. ವೈದ್ಯರು ನಮ್ಮ ಬಟ್ಟೆಯನ್ನು ತೆಗೆಸಿ ಬೇರೆ ಬಟ್ಟೆ ಹಾಕಿಸಿದ್ದರು ಎಂದರೆ ಸರಿ. ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದಾಗ ಬೆಳಗ್ಗೆ ಉಪಹಾರ, ಮಧ್ಯಾಹ್ನ ಊಟ ಹಾಗೂ ಔಷದೋಪಚಾರ ನೀಡಿದ್ದರು. ಮಾರನೇ ದಿನ ನಾನು ಮನೆಗೆ ಹೋದಾಗ ಸುಮಾರು ಮಧ್ಯಾಹ್ನ 2 ಗಂಟೆ ಆಗಿರಬಹುದು. ನನ್ನ ತಮ್ಮ ನಾರಾಯಣಸ್ವಾಮಿ ಬಂದು ನನ್ನನ್ನು ಕರೆದುಕೊಂಡು ಹೋಗಿದ್ದರು. ನಾರಾಯಣಸ್ವಾಮಿ ಬಂದಾಗ ವಿಶ್ವನಾಥಪುರ ಪೋಲಿಸರು ಆಸ್ಪತ್ರೆಯಲ್ಲಿ ಇದ್ದರು. ಪೋಲಿಸರು ನಮ್ಮ ಊರಿಗೆ ತಮ್ಮ ವಾಹನದಲ್ಲಿ ನಮ್ಮನ್ನುಕರೆದುಕೊಂಡು ಹೋಗಿರಲಿಲ್ಲ. ಘಟನೆ ನಡೆದಮಾರನೇ ದಿನ ಮಧ್ಯಾಹ್ನ 4 ಗಂಟೆಗೆ ನನ್ನ ಪತ್ನಿಯ ಅಂತ್ಯಕ್ರಿಯೆ ಆಗಿದೆ. ಅಂತ್ಯಕ್ರಿಯೆ ಸಮಯದಲ್ಲಿ ವಿಶ್ವನಾಥಪುರ ಪೋಲಿಸರು ನಮ್ಮೂರಿಗೆ ಬಂದಿದ್ದರು.

ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲು ಮಾಡಲು ಕಾಲಾವಕೋಶ ಕೋರಿದ್ದು ವಿನಂತಿಯ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ ಎಂದು ನುಡಿದಿದ್ದಾರೆ.

(ಮೋಹನ ಬಾಡಗಂಡಿ)
2ನೇ ಅಪರ ಜಿಲ್ಲಾ ಮತ್ತು ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.